ತುಮಕೂರು ಡಿಸ್ಟ್ರಿಕ್ಟ್.

ತುಮಕೂರು ಡಿಸ್ಟ್ರಿಕ್ಟ್ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳು ಸ್ 1907ನೆ ಇಸವಿ ಸೆಪಟಂಬರ್ 27ನೆ ತಾರೀಖಿನಲ್ಲಿ ನಡೆಸಿದ ಮೀಟಿಂಗ್ ಪ್ರೊಸೀಡಿಂಗ್ಸ್.

ನಂಬರು.	ಹೆಸರು.	ಹಾಜರು.	ಗೈರ್ ಹಾಜರು.
	ಕೆ. ಥೂರೆಸ್ವಾಮಿ ಅಯ್ಯರ್, ಎಸ್‌ಕ್ವೈಯರ್, ಡೆಪ್ಯುಟಿ ಕಮಿಷನರವರು ಮತ್ತು ಪ್ರಸಿಡೆಂಟರವರು.	ಹಾಜರು.	
	ಎಕ್ಸ್ ಅಫಿಷಿಯಲ್ ಮೆಂಬರುಗಳು.		
1	ಮೆ|| ಸಿ. ನಾರಾಯಣರಾಯರು, ಗುಬ್ಬಿ ಡಿವೀಜ್ ಅಸಿಸ್ಟೆಂಟ್ ಕಮಿಷನರವರು ಮತ್ತು ವೈಸ್ ಪ್ರಸಿಡೆಂಟರು.	ಡಿಟೋ	
2	,, ಸಿ. ವೆಂಕಟರಾಯರು, ಮದ್ದಗಿರಿ ಸಬ್ ಡಿವೀಜ್ ಅಸಿಸ್ಟೆಂಟ್ ಕಮಿಷನರವರು.	ಡಿಟೋ	
3	,, ಎಂ. ಶ್ರೀನಿವಾಸಮೂರ್ತಿಗಳು, ತುಮಕೂರು ಸಬ್ ಡಿವೀಜ್ ಆಫಿಸರವರು.	ಡಿಟೋ	
4	,, ಸಿ. ವಿ. ಮಹದೇವ ಶಾಸ್ತ್ರಿಗಳು, ತುಮಕೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರ್ ಯವರು		ಗೈರ್ ಹಾಜರು.
5	,, ಸಿ. ಅಪ್ಪದೊರೆ ಮೊದಲಿಯಾರ್, ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟೆರಿ ಆಫಿಸರವರು.		ಡಿಟೋ
6	,, ಎಸ್. ರಂಗಾಚಾರ್, ತುಮಕೂರು ಡಿಸ್ಟ್ರಿಕ್ಟ್ ಸ್ಕೂಲ್‌ಗಳ ಡೆಪ್ಯುಟಿ ಇನ್‌ಸ್ಪೆಕ್ಟರು.	ಡಿಟೋ	
	ನಾನ್ ಅಫಿಷಿಯಲ್ ಮೆಂಬರುಗಳು.		
1	ಮೆ|| ಕೆ. ನಲ್ಲಪ್ಪನವರು, ತುಮಕೂರು. ...	ಡಿಟೋ	
2	,, ಯಲ್ಲಯ್ಯ ಬಿ ದೊಡ್ಡ ಪುಟ್ಟಯ್ಯನವರು, ತುಮಕೂರು		ಕಾಯಿಲೆ ಸಬಬು ಗೈರ್ ಹಾಜರು.
3	,, ಶಿದ್ದಲಿಂಗಶೆಟ್ಟಿ ಬಿ ಶಿದ್ದೇಗೌಡರು, ತುಮಕೂರು ...		ಡಿಟೋ
4	,, ಕೆ. ಬಿ. ಶ್ರೀನಿವಾಸರಾಯರು, ಮದ್ದಗಿರಿ	ಡಿಟೋ	
5	,, ಜ. ಶಿವರಾಮಯ್ಯನವರು, ಮದ್ದಗಿರಿ ..		ಗೈರ್ ಹಾಜರು
6	,, ಗಂಗೇಗೌಡರು, ಚಿಕ್ಕನಾಯಕನಹಳ್ಳಿ ...		ಜರೂರು ಸ್ವಂತ ಕೆಲಸದ ನಿಮಿತ್ಯವಾಗಿ ಮೀಟಿಂಗಿಗೆ ಬರಲು ಅನಾನುಕೂಲವೆಂತ ಬರೆಸಿರುತ್ತಾರೆ.
7	,, ಸಿ. ಶ್ರೀನಿವಾಸರಾಯರು, ಪಾವುಗಡ ..	ಡಿಟೋ	
8	,, ವೆಂಬಾರ್ ವೆಂಕಟನರಸಿಹ್ಮಾಚಾರ್ಯರು, ಪಾವುಗಡ	ಡಿಟೋ	
9	,, ಪುಟ್ಟಸ್ವಾಮೈಯ್ಯ, ತಿಪಟೂರು ..		ಗೈರ್ ಹಾಜರು
10	,, ಕಿಂಗ್ರಿ ನಂಜಪ್ಪನವರು, ತಿಪಟೂರು ..		ಕಾಯಿಲೆ ಸಬಬು ಗೈರ್ ಹಾಜರು.
11	,, ದೊಡ್ಡ ಮಲ್ಲಯ್ಯನವರು, ಶಿರಾ ..		ಡಿಟೋ
12	,, ಕೆ. ರಾಮಾನುಜೈಯ್ಯಂಗಾರ್ರು, ಗುಬ್ಬಿ ..	ಡಿಟೋ	
13	,, ಹೊನ್ನಲಿಗೆಗೌಡರು, ಗುಬ್ಬಿ ..		ಗೈರ್ ಹಾಜರು
14	,, ಕೃಷ್ಣ ಸ್ವಾಮಿಶೆಟ್ಟರು, ಗುಬ್ಬಿ ...	ಡಿಟೋ	
15	,, ಆಬಿದಲ್ಲಿ ಸಾಹೇಬರು, ಕೋರ್ಟ್‌ಗೆರೆ ...	ಡಿಟೋ	
16	,, ವಿ. ನಾರಣಪ್ಪನವರು, ತುರ್ವೇಕೆರೆ ...		ಡಿಟೋ
17	,, ತಿಂಗ್ಯಾಚಾರ್ಯರು, ಕುಣಿಗಲ್ ...	ಡಿಟೋ	
18	,, ಜಿ. ರಾಮಸ್ವಾಮಯ್ಯನವರು, ಕುಣಿಗಲ್ ...		ಡಿಟೋ
19	,, ಚಿಕ್ಕಣಶೆಟ್ಟರು, ತಿಪಟೂರು ...		ಪ್ರೊತಿಯಿಂದ ಇವರ ಐವಜಿಗೆ ಬೇರೆ ಮೆಂಬರು ಚುನಾಯಿಸತಕ್ಕ ವಿಚಾರದಲ್ಲಿ ನಡವಳಿಕೆಲಿರುತ್ತೆ.

I. ಸ್ 1907ನೆ ಇಸವಿ ಏಪ್ರಿಲ್ ಮತ್ತು ಮೇ ಮಾಹೆಗಳ ಆಡಿಟ್ಟಾದ ಲೆಕ್ಕಗಳನ್ನು ಓದಿ ಪ್ಯಾಸ್ಮಾಡಲಾಯಿತು.

II. ಸ್ 1906—07ನೆ ಸಾಲ್ ಡಿಸ್ಟ್ರಿಕ್ಟ್ ಫಂಡು ಅಡಿರ್ಮಿಸ್ಟ್ರೇಷ್ ರಿಪೋರ್ಟು ಅದರ ಮೆಲಪ್ಪೂಮಿಗಳು ಓದಿ ಪ್ಯಾಸ್ಮಾಡಲಾಯಿತು.

III. ಸ್ 1907ನೆ ಇಸವಿಯ ದಸರಾ ಪ್ರಜಾ ಪ್ರತಿನಿಧಿ ಸಭೆಯ ಮೆಂಬರುಗಳು 27—8—1907ನೆ ಮಂಗಳವಾರದಲ್ಲಿ ತುಮಕೂರಿನಲ್ಲಿ ನಡೆಸಿದ ಪಿಲಿಮಿನರಿ ಮೀಟಿಂಗ್‌ನಲ್ಲಿ ಈ ಕೆಳಗೆ ಕಂಡ ವಿಷಯಗಳು ಚರ್ಚಿತವಾಗಿ ಆಯಾ ವಿಷಯಗಳಲ್ಲಿ ಫೈಲ್ ಬೋರ್ಡ್‌ನವರ ತೀರ್ಮಾನ ಈ ಕೆಳಗೆ ನಮೂದಿಸಿರುತ್ತೆ.

ದಸರಾ ಪ್ರಜಾಪ್ರತಿನಿಧಿ ಸಭೆಯ ಮೆಂಬರ ಹೆಸರು.	ವಿಷಯಗಳು.
ಮಿ|| ತಿನಪ್ಪನವರು, ತುಮಕೂರು	ತಾಲ್ಲೂಕು ಅವಲ್ದಾರ್ರ ಸಹಾಯದಂದೆ ತುಮಕೂರಿಂದ ಊರ್ಡಿಗೆರೆಗೆ ಇರುವ ರಸ್ತೆಯನ್ನು ಕೋಳಾಲಕ್ಕೆ ಆಜೆ 6 ಮೈಲಿವರಿಗೂ ಬಡಾಯಿಸಿ ಇರುತ್ತ. ಈ ರಸ್ತೆಗೆ ಅಲ್ಲಲ್ಲಿ ಆಗ್ಯೇಕಾಗಿರುವ ಸೇತುವೆಗಳನ್ನು ಸರ್ಕಾರದಿಂದ ಕಟ್ಟಿಸಿಕೊಡಬೇಕೆಂತಲೂ ಪ್ರತಿ ವಾರದಲ್ಲಿಯೂ ಸಂತೆ ನಡೆಯುವ ಹೂಲಿಕುಂಟೆ ಗ್ರಾಮದವರಿಗೆ ಸದರಿ ರಸ್ತೆಯನ್ನು ಬಡಾಯಿಸಿಕೊಡಬೇಕೆಂತಲೂ ಸಹಾ ಪ್ರಾರ್ಥನೆ.
	ಈ ವಿಷಯವನ್ನು ತಾಲ್ಲೂಕು ಬೋರ್ಡಿನವರಿಗೆ ಅಭಿಪ್ರಾಯಕ್ಕಾಗಿ ಕಳುಹಿಸಬೇಕೆಂತಲೂ, ಇಲ್ಲಿನ ಪ್ರದೇಶವು ಕಲ್ಲು ಪ್ರದೇಶವಾಗಿರುತ್ತೆಂತಲೂ, ಅಂಥಾ ಮುಖ್ಯವಾದ ಚಿಕ್ಕ ನದಿಗಳು ಈ ಪ್ರಾಂತ್ಯ ಬಹಳ ಅಪರೂಪವಾಗಿರುತ್ತೆಂತಲೂ ಸಹಾ ತೀರ್ಮಾನಿಸಲಾಯಿತು.
	(2) ಕೋಳಾಲ ಗ್ರಾಮದಲ್ಲಿ 500 ಸಂಖ್ಯೆಗೆ ಜಾಸ್ತಿಯಾಗಿ ಮನೆಗಳು ಇರುತ್ತಾಗಿ ಇದನ್ನು ಯೂನಿರ್ಯ ಆಗಿ ವಿಭಾಗಿಸಿ ಮಾಡಬೇಕೆಂತ ಪ್ರಾರ್ಥನೆ.
	ಯೂನಿರ್ಯಗಳಾಗಿ ವಿಭಾಗವಾಗಬೇಕೆಂತ ನಮೂದಿನಿಂದ ತುಮಕೂರು ತಾಲ್ಲೂಕು ಅಮಲ್ದಾರ್ರದ ತಲಪರುವ ಲೀಸ್ಟಿನಲ್ಲಿ ಈ ಗ್ರಾಮದ ವಿಷಯ ದಾಖಲಾಗಲಿಲ್ಲವೆಂಬ ಅಂಶ ವಿಚಾರಿಸಬೇಕೆಂತ ತೀರ್ಮಾನಿಸಲಾಯಿತು.
ವಿ|| ಕಡಬದ ಹುಚ್ಚೀರೇಗೌಡರು, ಗುಬ್ಬಿ ತಾಲ್ಲೂಕು.	(3) (a) ಕೊಡಿಯಾಲದಿಂದ ಗುಬ್ಬಿ ವರಿಗಿನ ತಿರಾ–ಗುಬ್ಬಿ ರಸ್ತೆ ರಿಪೇರಿ ಆಗತಕ್ಕ ಬಾಬ್ತಿ.
ಮಿ|| ಕಗ್ಗಪ್ಪನವರು. ,, ಮದಾರ್‌ಸಾಬರು.	(b) ತಿರಾ–ನಲ್ಲಿಗೆರೆ ರಸ್ತೆಯಲ್ಲಿರುವ ಕೊಡಿಯಾಲದ ಗ್ರಾಮದ ಸರಹದ್ದಿನಿಂದ ಗುಬ್ಬಿ ರೈಲ್ವೆ ಸ್ಟೇಷನ್‌ಗೆ ರಸ್ತೆ ಆಗಬೇಕು.
	ಈ ರಸ್ತೆ ಅನಾವಶ್ಯಕವೆಂತಲೂ ಈ ರಸ್ತೆ ಮಾಡಿಸುವದು ವ್ಯರ್ಥ ಖರ್ಚೆಂತಲೂ, ನಿಟ್ಟೂರು ಮಾರ್ಗವಾಗಿ ಕ್ರಮವಾದ ರಸ್ತೆಲಿ ಹೋಗದೆ ಸುಮಾರು 2½ ಮೈಲಿ ಫಾಸಲೆ ಕಮ್ಮಿ ಮಾಡಿಕೊಳ್ಳಲು ಹೋಗಬೇಕೆಂತ ಅಪೇಕ್ಷಿಸುವವರು ಹಾಲಿ ಇರುವ ಭಂಡಿ ಜಾಡೇ ಸಾಕಾದ್ದಾಗಿರುತ್ತೆಂತಲೂ ಮತ್ತು ನಿಟ್ಟೂರು ರೈಲ್ವೆ ಸ್ಟೇರ್ಷ ಗುಬ್ಬಿಗಿಂತಲೂ, ಕೊಡಿಯಾಲಕ್ಕೆ ಸಮೀಪವಾಗಿರುತ್ತೆಂತಲೂ ಸಹಾ ತೀರ್ಮಾನಿಸಲಾಯಿತು.
ಕಡಬದ ಮಿ|| ಹುಚ್ಚೀರೇಗೌಡರು, ಗುಬ್ಬಿ ತಾಲ್ಲೂಕು.	(4) ಯೂನಿರ್ಯಗಳಲ್ಲಿ ರಸ್ತೆಗಳು ಆಗತಕ್ಕ ಬಾಬ್ತಿ––
	ಈ ಬಾಬ್ತಿ ಹಣ ವದಗಿದ ಹಾಗೆಲ್ಲಾ ಸಾಲಿಯಾನಾ ಡಿಸ್ಟ್ರಿಕ್ಟು ಫಂಡು ಬಡಜಟ್ಟುಗಳಲ್ಲಿ ಹಣ ದಾಖಲಾಗುತ್ತಲಿರುತ್ತೆಂತಲೂ ಆಯಾ ಯೂನಿರ್ಯಗಳ ಪ್ರಾಮುಖ್ಯತೆ ಅನುಸರಿಸಿ ಈ ಬಾಬತ್ತು ಕಾಂಗಾರಿಗಳಿಗೆ ನಿಗೆ ಕೊಡಲ್ಪಡತಕ್ಕದ್ದೆಂತಲೂ ಸಹಾ ತೀರ್ಮಾನಿಸಲಾಯಿತು.
ಕಡಬದ ಮಿ|| ಹುಚ್ಚೀರೇಗೌಡರು, ಗುಬ್ಬಿ ತಾಲ್ಲೂಕು.	(5) ಪ್ರತಿ ವಾರದಲ್ಲೂ ಸಂತೆ ಆಗುವ ಕಲ್ಲೂರು ಮಾರ್ಗವಾಗಿ ಕಡಬದಿಂದ ಚಿಟ್ನಹಳ್ಳಿಗೆ ಬಂದು ರಸ್ತೆ ಆಗತಕ್ಕ ಬಾಬ್ತಿ.
	ಈ ಸಲಹೆ ಬೋರ್ಡಿನವರಿಗೆ ಸೂಕ್ತ ತೋರುವದಿಲ್ಲವೆಂತಲೂ ಭಾಟಾ ರಸ್ತೆಯಿಂದ ಕಲ್ಲೂರಿಗೆ ಹಾಲಿ ಇರುವ ಭಂಡಿ ಜಾಡು ಸಾಕಾಗಿ ಇರುತ್ತೆಂತಲೂ ಕಲ್ಲೂರಿಂದ ಚಿಟ್ನಹಳ್ಳಿಗೆ ಫಾಸಲೆ ಸುಮಾರು 3 ಮೈಲಿಗಳು ಆಗುತ್ತೆಂತಲೂ ಚಿಟ್ನಹಳ್ಳಿ ಕಲ್ಲೂರುನಂತೆ ರಸ್ತೆ ಆಗಬೇಕಾದ ಅವಶ್ಯಕತೆವುಳ್ಳ ಗ್ರಾಮಗಳು ಪ್ರತಿ ತಾಲ್ಲೂಕಿನಲ್ಲಿಯೂ ಅನೇಕವಿರುತ್ತೆಂತಲೂ ಹಾಗಿದ್ದಾಗ್ಯೂ ಈ ವಿಚಾರದಲ್ಲಿ ಪುನರಾಲೋಚನೆ ಬಗ್ಗೆ ಇತರೆ ಅರ್ಹವಾದ ಕಾರಣಗಳು ಈ ಮೇರೆ ಎಂಬುವದನ್ನು ಕುರಿತು ತಿಳಿಸತಕ್ಕ ಬಗ್ಗೆ ತಾಲ್ಲೂಕು ಬೋರ್ಡಿನವರನ್ನು ಕೇಳತಕ್ಕದ್ದೆಂದು ಸಹಾ ತೀರ್ಮಾನಿಸಲಾಯಿತು.
ಡಿಟೋ	(6) ಚೇಳೂರು–ಹಾಗಲ್ವಾಡಿ ರಸ್ತೇಲಿರುವ ಹೊಸಕೆರೆ ಗ್ರಾಮದಿಂದ ನಿಟ್ಟೂರು ರೈಲ್ವೆ ಸ್ಟೇರ್ಷಗೆ ಅಳಲಗಟ್ಟ–ಮೂಗನಾಯಕನಹಳ್ಳಿ ಗ್ರಾಮಗಳ ಮಾರ್ಗವಾಗಿ ಬಂದು ರಸ್ತೆ ಆಗತಕ್ಕ ಬಾಬ್ತಿ.
	ಹಾಲಿ ಇರುವ ಕ್ರಮವಾದ ರಸ್ತೆ ಸುಮಾರು 15 ಮೈಲಿಗಳು ಆಗಬೇಕೆಂತ ಅಪೇಕ್ಷಿಸುವ ಮಾರ್ಗದಿಂದ ಸುಮಾರು 4 ಮೈಲಿಗಳು ಉಳಿತಾಯವಾಗಬಹುದೆಂತಲೂ, ಬೋರ್ಡಿನವರು ಇಂಥಾ ಸಲಹೆಗಳನ್ನು ಅವರ ಸಮುಖಾವಲೋಚನೆಗೆ ತೆಗದುಕೊಳ್ಳಲು ಆಗಲಾರದೆಂತ ತೀರ್ಮಾನಿಸಲಾಯಿತು.
ಮಿ|| ಕಗ್ಗಪ್ಪನವರು, ,, ಮದಾರ್‌ಸಾಬರು.	(7) ಗುಬ್ಬಿ–ಹೆಬ್ಬೂರು ರಸ್ತೆಯ 2ನೆ ಮೈಲಿಯಿಂದ ಚಿಟ್ನಹಳ್ಳಿಗೆ ಬಂದು ರಸ್ತೆ ಆಗತಕ್ಕ ಬಾಬ್ತಿ.
	ಈ ರಸ್ತೆಯ ಉಪಯೋಗವು ಬಹಳ ಮಟ್ಟಿಗೆ ಅನುಮಾನಾಸ್ಪದವಾದ್ದೆಂತಲೂ ಈ ವಿಷಯವನ್ನು ತಾಲ್ಲೂಕು ಬೋರ್ಡಿನವರ ಅಭಿಪ್ರಾಯಕ್ಕಾಗಿ ಅವರಲ್ಲಿಗೆ ಕಳುಹಿಸತಕ್ಕದ್ದೆಂತಲೂ ಸಹ ತೀರ್ಮಾನಿಸಲಾಯಿತು.

ಜನರಲ್ ರೆಜ್ಯುಲ್ಯೂಷ್ನ್.

ಬೋರ್ಡಿನವರಿಗೆ ಇತರೇ ಅನೇಕ ಬಾಬುಗಳಿಗಾಗಿ ಹಣ ವದಗಿಸಬೇಕಾದ ಅವಶ್ಯಕತೆ ಇದ್ದೇ ಇರುತ್ತೆ. ಆದ್ದರಿಂದ ಹಾಲಿ ಇರುವ ರಸ್ತೆಗಳನ್ನು ಕ್ರಮವಾಗಿ ಇಟ್ಟುಕೊಳ್ಳಲಿಕ್ಕೇನೆ ಬಹಳ ಕಷ್ಟದಿಂದ ಹಣ ವದಗಿಸುತ್ತಲಿರುತ್ತೆ. ಅಲ್ಲಲ್ಲಿ ಕೆಲವು ಮೈಲಿಗಳ ಫಾಸಲೆ ಕಡಮೆ ಮಾಡಿಕೊಳ್ಳತಕ್ಕ ಉದ್ದೇಶ್ಯದಿಂದ ಅಮುಖ್ಯವಾವ ಸಂಣ ಸಂಣ ಭಂಡಿಜಾಡುಗಳನ್ನು ರಸ್ತೆಗಳನ್ನಾಗಿ ಮಾಡಿದ್ದೆ ಆದರೆ ಇವುಗಳಿಗಿಂತಲೂ ಜನಗಳಿಗೆ ಅತ್ಯಂತ ಉಪಯುಕ್ತವಾವ ಇತರೇ ಕಾಂಗಾರಿಗಳನ್ನು ಬೋರ್ಡಿನವರು ನಿಲ್ಲಿಸಬೇಕಾಗಿ ಬರುತ್ತೆ. ಡಿಸ್ಟ್ರಿಕ್ಟು ಆಮುಳಿ ಇರುವ ಮುಖ್ಯ ಮುಖ್ಯವಾದ ಭಂಡಿ ಜಾಡುಗಳನ್ನು ಸರಿಯಾದ ಸ್ಥಿತೀಲಿ ಇಟ್ಟುರತಕ್ಕ ಭಾಗದಲ್ಲೇನೋ ನಿಗೆ ಕೊಡಲ್ಪಡುತ್ತೆಂತ ಸಹಾ ತೀರ್ಮಾನಿಸಲಾಯಿತು.

ಮಂಜೂರಾದ ಡಿಸ್ಟ್ರಿಕ್ಟು ಕಾಂಗಾರಿಗಳ ತಖ್ತೆ.

		ಮೊಬಲಗು.
	(1) ಶಿರಾ ತಾಲ್ಲೂಕು.—	ರೂ.
1.	ತರೂರು ಗ್ರಾಮದಲ್ಲಿ ಬಂದು ಶೀನೀರು ಭಾವಿ ತೋಡಿಸತಕ್ಕ ಬಗ್ಗೆ	107.
2.	ಶಿರಾ ಮುನಾಫರಖಾನೆಯಲ್ಲಿ ಬಂದು ಲ್ಯಾಟರ್ಸ ಕಟ್ಟತಕ್ಕ ಬಗ್ಗೆ	80.
3.	ಶೀಬಿ ಛತ್ರದಲ್ಲಿರುವ ಭಾವಿಯನ್ನು ಆಳಪಡಿಸತಕ್ಕ ಬಗ್ಗೆ	25.
4.	ಗಜ್ಜರಹಳ್ಳಿ ಬಳಿ ಬಂದು ಶೀನೀರು ಭಾವಿ ತೋಡಿಸತಕ್ಕ ಬಗ್ಗೆ	150.
5.	ನಿಜಂತಿ ಗ್ರಾಮದಲ್ಲಿನ ಭಾವಿಯನ್ನು ಆಳಪಡಿಸತಕ್ಕ ಬಗ್ಗೆ	24.
6.	ಕೊಟ್ಟಾ ಗ್ರಾಮದಲ್ಲಿ ಬಂದು ಶೀನೀರು ಭಾವಿ ತೋಡಿಸತಕ್ಕ ಬಗ್ಗೆ	260.
7.	ಪಾತನಾಯಕನಹಳ್ಳಿಯಲ್ಲಿ ಒಂದು ಶೀನೀರು ಭಾವಿ ತೋಡಿಸತಕ್ಕ ಬಗ್ಗೆ	380.
8.	ಕಳ್ಳಂಬೆಳ್ಳದ ಮುನಾಫರಖಾನೆ ಕಾಂಗಾರಿ ಬಗ್ಗೆ	400.
	ಜುಮ್ಲಾ	1,426.
	(2) ತುಮಕೂರು ತಾಲ್ಲೂಕು.—	
	ಚಿಕ್ಕನಾರುವಂಗಲದಲ್ಲಿ ಬಂದು ಶೀನೀರು ಭಾವಿ ತೋಡಿಸತಕ್ಕ ಬಗ್ಗೆ	283.
	(3) ಮದ್ದಗಿರಿ ತಾಲ್ಲೂಕು.—	
1.	ಅವಿನಮೆಡು ಗ್ರಾಮದಲ್ಲಿ ಬಂದು ಶೀನೀರು ಭಾವಿ ತೋಡಿಸತಕ್ಕ ಬಗ್ಗೆ	160.
2.	ಯರ್ರಗುಂಟೆ ಗ್ರಾಮದಲ್ಲಿ ಬಂದು ಶೀನೀರು ಭಾವಿ ತೋಡಿಸತಕ್ಕ ಬಗ್ಗೆ	305.
3.	ಕಲ್ಯಾಪುರದಲ್ಲಿ ಬಂದು ಶೀನೀರು ಭಾವಿ ತೋಡಿಸತಕ್ಕ ಬಗ್ಗೆ	326.
4.	ತೆರೆಯೂರು ಛತ್ರದ ಕಾಂಗಾರಿ ಬಗ್ಗೆ	244.
	ಜುಮ್ಲಾ	1,035.

IV. ಮಲಪ್ಪಾಡಿ ಡಿಸ್ಟ್ರಿಕ್ಟು ಸಡಕು ಕಾಂಗಾರಿಗಳ ಅಂದಾಜಿಗಳ ಲೀಸ್ಟು ಓದಿ ಮಂಜೂರ್ಮಾಡಲಾಯಿತು.

V. ಭಾವಿ ವಗೈರೆ ಕಾಂಗಾರಿಗಳಿಗಾಗಿ ಶಿರಾ ತಾಲ್ಲೂಕಿಗೆ ಮಂಜೂರಾದ 1,453 ರೂಪಾಯಿಗಳನ್ನು ಹಾಲಿ ಕಳುಹಿಸಿರುವ ಅಂದಾಜಿಗಳಲ್ಲಿ ಕಂಡ ಕಾಂಗಾರಿಗಳಿಗೆ ರೀ ಅಪ್ರೊಪ್ರಿಯೇಷ್ನ ಮಾಡಿಕೊಳ್ಳಲು ಮಂಜೂರಿ ಆರ್ಡರ್ ಅಪೇಕ್ಷಿಸಲ್ಪಟ್ಟು ಮದ್ದಗಿರಿ ಸಬ್ ಡಿವಿಜ್ ಆಫಿಸರವರ 23—9—1907ನೆ ಮಾರ್ಕಂ 381ನೆ ನಂಬರು ಯಾದಿ ವಡನೆ ತಲ್ಪಿಡಿ ಶಿರಾ ತಾಲ್ಲೂಕು ಅಮಲ್ದಾರ್ರ 21—9—1907ನೆ ಮಾರ್ಕಂ 135ನೆ ನಂಬರು ರಿಪೋರ್ಟು ಓದಿ ಮಂಜೂರ್ಮಾಡಲಾಯಿತು.

VI. ಯಡಿಯೂರು—ತಿಪಟೂರು ರಸ್ತೇಲಿ ಬಂದು ಟನಲ್ ಹೊಸದಾಗಿ ಪುನಃ ಕಟ್ಟಲು ತಯಾರಾದ 434 ರೂಪಾಯಿಗಳ ಅಂದಾಜು ಓದಿ ಅಪ್ರೂವ್ ಮಾಡಲಾಯಿತು.

VII. ಮುಂದಿನ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗ್ ಸ್ರ 1907ನೆ ಇಸವಿ ಡಿಸೆಂಬರ್ ಮಾಹೇ 1ತಾರೀಖು 3ರಲ್ಲು ಮಧ್ಯಾಹ್ನ 2 ಘಂಟೆಗೆ ನಡಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

ಕೆ. ದೊರೆಸ್ವಾಮಿ ಅಯ್ಯರ್,
ಪ್ರೆಸಿಡೆಂಟ್.

ಮೈಸೂರು ಡಿಸ್ಟ್ರಿಕ್ಟು

ಇನ್ಸಿ ಹಾರ್ನ್ಮೆಂ.

ತಾರೀಖು 11ನೆ ಅಕ್ಟೋಬರ್ 1907.

ತಿರುಮಕೂಡ್ಲು ನರಸೀಪುರ ತಾಲ್ಲೂಕು ತಲ್ಲಾಡು ಹೋಬಳಿಗೆ ಸೇರಿದ ಖಾಯಂ ಗುತ್ತಾ ಮೇಗಡಹಳ್ಳಿ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ತಿರುಮಕೂಡ್ಲು ನರಸೀಪುರ ತಾಲ್ಲೂಕು ಕಛೇರಿಯಲ್ಲಿ 1908ನೆ ಜನವರಿ ಮಾಹೆ 8ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಸೀಲ್ ಬಗ್ಗೆ ಸ್ರ 1907ನೆ ಇಸವಿ ಅಕ್ಟೋಬರ್ ತಾರೀಖು 31ನೆ ಮಾರ್ಕಂ 43ನೆ ನಂಬರ್ ಮೈಸೂರು ಗೆಜೆಟ್ಟಿನ II ನೆ ಭಾಗದ 515, 516ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 11ನೆ ಅಕ್ಟೋಬರ್ 1907.

ಹುಣಸೂರು ತಾಲ್ಲೂಕು ಪೆರಿಯಾಪಟ್ಟಣದ ಹೋಬಳಿಗೆ ಸೇರಿದ ಜೋಡಿ ಹಟ್ಟಿ ಹೆಬ್ಬಾಗಿಲು ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಹುಣಸೂರು ತಾಲ್ಲೂಕು ಅಮಲ್ದಾರ್ರವರ ಕಛೇರಿಯಲ್ಲಿ 1907ನೆ ಡಿಸೆಂಬರ್ ಮಾಹೆ 5ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಸೀಲ್ ಬಗ್ಗೆ ಸ್ರ 1907ನೆ ಇಸವಿ ಅಕ್ಟೋಬರ್ 31ನೆ ಮಾರ್ಕಂ 43ನೆ ನಂಬರ್ ಮೈಸೂರು ಗೆಜೆಟ್ಟಿನ II ನೆ ಭಾಗದ 514, 515ನೆ ನಂಬರ್ ಪೇಜು ನೋಡತಕ್ಕದ್ದು.

ಟಿ. ಕೆ. ಸುಂದರರಾಜೈಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.